ಚನ್ನರಾಯಪಟ್ಟಣ 1, ತಿಪಟೂರು 15, ಗುಬ್ಬಿ 42, ತುಮಕೂರು 12.

ಉ) ರೂ 935.17 ಲಕ್ಷಗಳು

ಊ) ರೂ 2801.01 ಲಕ್ಷಗಳು

ಎ) ಸುಮಾರು ಒಂದು ವರ್ಷ.

ರಾಜ್ಯದ ಗಡಿ ಅಭಿವೃದ್ಧಿ ಯೋಜನೆ

679 - ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್(ಸಂಕೇಶ್ವರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದ ಎಷ್ಟು ಜಿಲ್ಲೆಗಳು ಗಡಿ ಅಭಿವೃದ್ಧಿಯಲ್ಲಿ ಬರುತ್ತವೆ?

ಆ) ಈ ಗಡಿ ಅಭಿವೃದ್ಧಿಯ ಹಣವನ್ನು ರಾಜ್ಯದ ಗಡಿಯಿಂದ ಎಷ್ಟು ಕಿ.ಮಿ.ವರೆಗೆ ಉಪಯೋಗಿಸಲಾಗುತ್ತಿದೆ?

ಇ) ಈ ಬಗ್ಗೆ ಕೊಡುವ ಹಣ ವಿಧಾನ ಸಭಾ ಸದಸ್ಯರಿಗೆ ಮಾತ್ರವೇ ಅಥವಾ ವಿಧಾನ ಪರಿಷತ್ ಸದಸ್ಯರು ಕೆಲಸ ತೆಗೆದುಕೊಳ್ಳಬಹುದೇ?

ಈ) ಬೆಳಗಾವಿ ಗಡಿ ಅಭಿವೃದ್ಧಿ ಕೆಲಸಕ್ಕಾಗಿ 1989 ರಿಂದ ಇಲ್ಲಿಯವರೆಗೆ ಯಾವ ಯಾವ ಶಾಸಕ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು.):

ಅ) ರಾಜ್ಯದಲ್ಲಿ 15 ಜಿಲ್ಲೆಗಳು ಗಡಿ ಅಭಿವೃದ್ಧಿಯಲ್ಲಿ ಬರುತ್ತವೆ.

ಆ) ಗಡಿ ಅಭಿವೃದ್ಧಿಯ ಯೋಜನೆಯಲ್ಲಿ ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಿ ಗಡಿಯಿಂದ 10 ಕಿ.ಮಿ. ಒಳಗೆ ಬರುವ ಹಳ್ಳಿಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಆಧ್ಯತೆ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮಾರ್ಗಸೂಚನೆ ನೀಡಲಾಗಿದೆ.

ಇ) ವಿಧಾನ ಸಭಾ ಸದಸ್ಯರು ವಿಧಾನ ಪರಿಷತ್ ಸದಸ್ಯರು, ಲೋಕಸಭಾ ಸದಸ್ಯರುಗಳಉ ಸೂಚಿಸುವ ಕೆಲಸಗಳನ್ನು ತೆಗೆದುಕೊಳ್ಳಬಹುದು.

ಈ) ಗಡಿ ಅಭಿವೃದ್ಧಿ ಕೆಲಸ 1990-91ನೇ ಸಾಲಿನಿಂದ ಪ್ರಾರಂಭವಾಗಿದೆ. ಬೆಳಗಾವಿ ಜಿಲ್ಲೆಗೆ ಇದುವರೆವಿಗೂ ಬಿಡುಗಡೆಯಾದ ಹಣವನ್ನು ಕೆಳಗೆ ಸೂಚಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

ತಾಲ್ಲೂಕು	1990-91	1991-92	1992-93	1993-94
ಅಥಣಿ	9.00	25.00	22.116	10.00
ಬೆಳಗಾವಿ	9.00	25.00	22.116	10.00
ಚಿಕ್ಕೋಡಿ	9.00	25.00	22.116	10.00
ಹುಕ್ಕೇರಿ	9.00	25.00	22.116	10.00
ಖಾನಾಪುರ	9.00	25.00	22.116	10.00